4. ಪ್ರತಿ ಟೆಂಡರ್ ವಡನೆ 100 ರೂಪಾಯಿಗಳು ನಗದಾಗಿ ಆಗಲಿ ವ ಗವರ್ನಮೆಂಟ್ ಪ್ರೋನೋಟ್ಸ್ ಮೂಲಕವಾಗಿ ಆಗಲಿ ಸತ್ತಾರದಲ್ಲಿ ಕೇವಣೇ ಇಡುವದಕ್ಕಾಗಿ ಹಾಜರ್ಮಾಡತಕ್ಕದ್ದು ಮತ್ತು ಆತಗೂರು ದೊಡ್ಡಕೆರೇ ರೆಸ್ಟೋರೇರ್ಷ ಕಾಮಗಾರೀ ಟೆಂಡರ್ ಯೆಂದು ಮೇಲ್ ವಿಳಾಸು ಬರದು ಕಳುಹಿಸಬೇಕು. ಇವಕ್ಕೆ ತಪ್ಪಿದರೆ ಟೆಂಡರ್ ತಿರಸ್ಕರಿಸಲ್ಪಡುವದು.

5. ಟೆಂಡರ್‌ಯಾನೆ ದರಖಾಸ್ತು ಅಬ್ಬೈರ್ ಮುಂಜಾರಾತಿಯು ಜೀಫ್ ಇಂಜನಿಯರ್ ಸಾಹೆಬರವರಿಗೆ ಸೇರಿದ್ದಾಗಿಇಹೆ ದರಖಾಸ್ತು ಅಂಗೀಕರಿಸಿದ್ದಕ್ಕೆ ಆಗಲಿ ಅಥವಾ ತಿರಸ್ಕರಿಸಿದ್ದಕ್ಕೆ ಆಗಲಿ ಕಾರಣ ಕೊಡಲು ಬದ್ಧರಾಗಿ ಇರುವದಿಲ್ಲ.

6. ದರಖಾಸ್ತು ಮುಂಜಾರಾದ 8 ದಿವಸಗಳ ವಳಗಾಗಿ ಚೆಡದರಖಾಸ್ತುದಾರನು ಕಂಟ್ರಾಕ್ಟು ಬಾಂಡು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಕಂಟ್ರಾಕ್ಟು ವಜಾ ಮಾಡಿ ಅಡ್ವಾನಸಾಗಿ ಕೊಟ್ಟು ಇದ್ದ ಕೇವಣೇ ಮೊಬಲಗನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ.

7. ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರ ಆಫಿಸ್ ನೋಟಿಸ್ ಬೋರ್ಡಿನ ಮೇಲೆ ಸರಿಯಾದ ಕಾಲದಲ್ಲಿ ಅಂಗೀಕರಿಸಿದ ಚಡ ದರಖಾಸ್ತುದಾರನ ಹೆಸರು ಪ್ರಕಟಿಸಲ್ಪಡುತ್ತೆ.

8. ಅಪ್ಪೈರವಳಗಾಗಿ ದರಖಾಸ್ತು ಅಂಗೀಕರಿಸಿದ ವಿಷಯಕ್ಕಾಗಲಿ ಅಥವಾ ತಿರಸ್ಕರಿಸಿದ ವಿಷಯವೇ ಆಗಲಿ ತಿಳಿಯಲು ಬರದು ಕೊಂಡರೆ ಜವಾಬು ದೊರಿಯಲಾರದು.

9. ಯಾವದಾದರೂ ಒಂದು ದರಖಾಸ್ತು ಅಂಗೀಕರಿಸಿದ ತರುವಾಯ ತಿರಸ್ಕರಿಸಿದ ದರಖಾಸ್ತು ಸಂಗಡ ಕಳುಹಿಸಿದ ಡಿಪಾಜಿಟ್ ಮೊಬಲಗನ್ನ ವಾಪಸ್ ಮಾಡಲ್ಪಡುತ್ತೆ.

ವಿ. ಹೆಚ್. ಕವಿ,
ಎಗ್ಜಿಕ್ಯೂಟಿವ್ ಇಂಜನಿಯರ್.

---

## ಹಾನನ ಡಿಸ್ಟ್ರಿಕ್ಟು.

1889ನೇ ಇಸವಿ 14ನೇ ಅಕ್ಟೋಬರ್.

ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ, ಹಾರ್ಸ ಡಿಸ್ಟ್ರಿಕ್ಟು ಅರೀಕೇರೇ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜಮಾ ಯಿಸಿಕೊಳ್ಳತಕ್ಕ ಹಕ್ಕು ದಾರಿಯು ಸದರೀ ಅರೀಕೆರೇ ತಾಲ್ಲೂಕು ಕಛ್ಚೇರಿಯಲ್ಲಿ ಸ್ ೧೮೮೯ನೇ ಇಸವಿ ನವೆಂಬರ್ ತಾರೀಖು 15ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜ್ ಮಾಡಲ್ಪಡುವದು.

2. ಅಮಲದಾರ್ರು ಅಥವಾ ತಿರಸ್ತೇದಾರ್ರು ಹರಾಜ್ ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಹಾರ್ಸ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮುಂಜಾರ್ಮಾಡಲ್ಪಡುವ ವರಿಯಂತರ ಕಾಯವಾದ್ದಾಗಿ ತಿಳಿದು ಕೊಳ್ಳಕೂಡದು.

4. ಈ ಯಿಜಾರೆಯು ಸ್ ೧೮೯೦ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜ್‌ಕಾಲದಲ್ಲಿ ಕ್ರಯದ ಮೊಬಲಗು ವೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮುಂಜಾರ್ಮಾಡಲ್ಪಟ್ಟ ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದವಳಗಾಗಿ ಕ್ರಯದ ದಟ್ಟುಮೊಬಲಿನ ಪೈಲೆ ರೂಪಾಯಿ 1ಕ್ಕೆ ವಂದಾಣೆಯಂತೆ ಆಗುವ ಲೋಕಲ್‌ಸೆನ್ಸು ದೇಬೀಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ಟು ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಹಾಂಗೆ ಡಿಪಾಜಿಟ್ಟು ಮೊಬಲಗು ಹಾಜರ್ಮಾಡದಿದ್ದರೂ, ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವಲ್ ಕ್ರಯದಾರನ ಖರ್ಚಿಗೂ ಮತ್ತು ನುಕ್ಸಾನಿಗೂ ವಳಪಟ್ಟಿಪುನಹ ವಿಕ್ರಯಿಸಲ್ಪಡುವದು.

6. ಹರಾಜ್ ಷರತ್ತುಗಳು—

(a) ಹಿಡುವಳೀ ಜಮೀನಿನಲ್ಲಿ ಇರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡುವಳಿದಾರನ ಸಮ್ಮತಿಯನ್ನ ವಡಿಯಬೇಕು ಜಮೀನ್ ಹಿಡುವಳೀ ದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೊಡದು ಯಿಜಾರೇದಾರನಿಗೆ ಮಾರಬೇಕೇ ಹೊರ್ತು ಯಿತರ ಜನಗಳಿಗೆ ಮಾರಲೂಕೂಡದು.

(b) ಯಿಜಾರ್‌ದಾರನು ಹುಲ್ಲುಬನ್ನಿ ಯಿಜಾರಿದಾರರ ಚರಾವು ಹಕ್ಕಿನಲ್ಲಿ ಪ್ರವೇಸಿಸಕೂಡು.

(c) ಬಂಜರು ಜಮಿನುಗಳು ಸಾಗುವಳಿಬ್ಯೆ ದರಖಾಸ್ತು ಬಂದಲ್ಲಿ ಆಪ್ರಕಾರ ಸಾಗುವಳಿಗೆ ಕೊಟ್ಟುಬಿಡುವದಕ್ಕೆ ಕುರಂಗವ ಯಿಜಾರೇ ದಾರನು ಅಡ್ಡೀಹೇಳಕೂಡದು. ಅಂತಾ ಜಮಿನುಗಳಲ್ಲಿ ಕುರಂಗದಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ವಾತ್ರ ಯಿಜಾರೇದಾರನಿಗೆ ಪೂಳದುಯಿರುತ್ತೆ.

(d) ಯಿಜಾರೇದಾರನು ಕಲ್ಲುಗಳಿಗೋಸ್ಕರ ಜಮಿನುಗಳನ್ನ ಅಗಿಯಕೂಡದು ವಂದುವೇಳೆ ಹಾಗೆ ಆಗದಲ್ಲಿ, ಆ ಗುಂಡಿಗಳನ್ನು ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮಿನು ಲಾಯಖು ಯಿರುವಹಾಗೆ ಮಾಡಬೇಕು.

ಬಿ. ಕೃಷ್ಣಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

---

## ನಗರ ಡಿವಿಜ್ ಡಿಸ್ಟ್ರಿಕ್ಟು ಜಡ್ಜ್‌ರವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 78.

ಮೃತಪಟ್ಟ ಮೆಕಡೀಮನೇ ಮಲ್ಲಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾಳು ಸಾಂತವ್ವ, ಮೃತಪಟ್ಟ ಸದರೀ ಮಲ್ಲಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ತಿವಮೊಗ್ಗ ತಾಲ್ಲೂಕು ಕೂಚನಹಳ್ಳಿ ಸ್ಥಳದ ಸಾಂತವ್ವನು ಸದರೀ ಕೂಚನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಮಲ್ಲಪ್ಪನ ಜಿಂದಗಿ ಎಗ್ಯಾಗಿ ಬರಬೇಕ್ಕ 900 ರೂ

ಪಾಯಿ ನಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿ ಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸಾಂತವ್ವನ ಅರ್ಜಿಯನ್ನು 1889ನೇ ಇಸವಿ ನವೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಪ್ಪನ ಆಸ್ತಿಗೆ ಹಕ್ಕುದಾರ ರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಸೆಪ್ಟಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

---

## ಕಡೂರು ಡಿಸ್ಟ್ರಿಕ್ಟ್.

### ಪ್ರಕಟನೆ.

ಇದರ ಅಡಿ ಕಂಡ ಡಿಪೋಗಳಿಗೆ ಅವಕ್ಕೆ ಯದುರಾಗಿ ಕಾಣಿಸಲ್ಪಟ್ಟ ಜಂಗ್ಲಿಗಳಿಂದ ನಾಟಾಗಳನ್ನೂ ಬೆಲಗುಗಳನ್ನೂ ಮತ್ತು ಕಿರ ಗಳುಗಳನ್ನೂ ಬರುವ 1890ನೇ ಮಾರ್ಚ್ 31ನೇ ತಾರೀಖು ವಳಗಾಗಿ ಜಮಾಯಿಸಿಕೊಡಲು ಇಷ್ಟವುಳ್ಳವರು ಟಿಂಡರ್‌ಯಾನೇ "ದರಖಾ ಸ್ತು" ಕೊಡಬಹುದು.

| ಡಿಪೋ ಹೆಸರು. | ತರಹ. | ಜಮಾಯಿಸಿ ಕೊಡಬೇ ಕಾದಸಂಖ್ಯೆ. | ಯಾವ ಜಂಗ್ಲಿಯಿಂದ ಜಮಾಯಿಸಿ ಕೊಡತಕ್ಕದ್ದು ವಗೈರೆ. |
|---|---|---|---|
| ಡಿಕ್ಕುವಳ್ಳೀ ಡಿಪೊ | ಕಳದ ವರುಷಗಳಲ್ಲಿ ಕಡದು ಬಿದ್ದ ಹೇರೆಕೊಂಬೆ ವಗೈರೆ ಸುಗವಾನೀ ನಾಟಾಗಳು | 200 | ಲಕ್ಕುವಳ್ಳೀ ಡಿಸ್ಟ್ರಿಕ್ಟು ಮತ್ತು ಮನ್ನಾ ಜಂಗ್ಲಿ |
| ಡಿಟೋ | ಹೊಸ ತ್ಯಾಗದ ನಾಟಾಗಳು | 100 | ಡಿಪೋ ಫಾರೆಸ್ಟ್ ಇಲಾಖೆಯವರಿಂದ ನಿಷ್ಕರ್ಷ ಮಾಡಲ್ಪಟ್ಟವುಗಳು |
| ಡಿಟೋ | ಮನ್ನಾಜಾತಿ ನಾಟಾ | 150 | ಡಿಟೋ ಡಿಟೋ |
| ಡಿಟೋ | ಕಾಡು ಜಾತಿ | 50 | ಡಿಟೋ ಡಿಟೋ |
| ತರೀಕೆರೇ ಡಿಪೊ | ತ್ಯಾಗದ ಬೆಲಗು | 1000 | ಹಾದೀಕೆರೇ ಸಾಸ್ವಿಹಳ್ಳಿ ಮತ್ತು ಗೋಪಾಲ ಗುಡ್ಡದ ಜಂಗ್ಲಿ ಡಿಟೋ |
| ಡಿಟೋ | ಸಂಣ ಬಿದರು | 100,000 | ಉಬ್ರಾಣೀ ಮನ್ನಾ ಜಂಗ್ಲಿಯು ಕಿದ್ದರಹಳ್ಳೀ ಮತ್ತು ಗಂಗೂರ ಜಂಗ್ಲಿಗಳು |
| ಹೇಬ್ಬೇಟೆಂವರೆ ಡಿಪೊ | ತ್ಯಾಗ | 150 | ಮುತ್ತೋಡಿ ಮತ್ತು ತೇಗೂರ ಗುಡ್ಡದ ಜಂಗ್ಲಿಗಳಲ್ಲಿ ಫಾರೆಸ್ಟ್ ಇಲಾಖೆಯಿಂದ ನಿಷ್ಕರ್ಷ ಮಾಡಿದವುಗಳು. |
| ಡಿಟೋ | ಮನ್ನಾಜಾತಿ | 100 | ಡಿಟೋ ಡಿಟೋ |

2. ಪ್ರತಿ ಒಂದು ದರಖಾಸ್ತಿನ ಲಕೋಟೆ ಮೇಲೆಯೂ "ಇಂಥಾ ಜಂಗ್ಲಿಯಿಂದ ಇಂಥಾ ಡಿಪೋಕ್ಕೆ ತಯಾರಿಯಿಂದ ಹೇರಿತಂದು ಹುವ ಬಗ್ಯೆ ದರಖಾಸ್ತು" ಯಂದು ಬರದು ರವಾನಿಸತಕ್ಕದ್ದು.

3. ಕಡೂರು ಡಿಸ್ಟ್ರಿಕ್ಟು ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಜರ್‌ವೇಟರ್ ಸಾಹೆಬರವರು 31ನೇ ಅಕ್ಟೋಬರ್ ಲಾಯ್ಕರವರಿಗೆ ದರ ಸ್ತುಗಳನ್ನು ಹಿಡಿಯುತ್ತಾರೆ.

4. ಕಂಟ್ರಾಕ್ಟು ಮಾಡತಕ್ಕವರುಗಳು ಮೇಲೆ ಹೇಳಿದ ಜಂಗ್ಲಿಗಳಿಂದ ಬಂದು ಜಂಗಲ್‌ಗಿಂತ ಹೆಚ್ಚಾದ ಜಂಗಲ್‌ಗಳಿಂದ ತಯಾ ರಾದ ನಾಟಾಗಳನ್ನು ಮತ್ತು ಬೊಂಬುಗಳನ್ನು ರಫ್ತು ಮಾಡುವದಕ್ಕೆ ದರಖಾಸ್ತು ಕೊಡುವ ಪಕ್ಷದಲ್ಲಿ ಯಿಷ್ಟು ಕಮ್ಮಿದರಗಳಿಗೆ, ಹೇಳಿದ ಜಂಗಲ್‌ಗಳಿಂದ ನಾಟಾಗಳನ್ನು ಮತ್ತು ಬೊಂಬುಗಳನ್ನು ಕಡದು ತಯಾರಿಯಿಂದ ಯಾವ ಯಾವ ಡಿಪೋಗಳಿಗೆ ರಫ್ತು ಮಾಡುವದಕ್ಕೆ ಆಗುತ್ತೋ ಅದನ್ನು ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ನಾಟಾ ಮತ್ತು ಬೊಂಬುಗಳ ತಯಾರಿ ಯಿದುವರೆಗೂ ಡಿಸ್ಟ್ರಿ ಜಾರಿಯಲ್ಲಿ ಇರುವ ಮಾಮೂಲಿನಂತೆ ಇರಬೇಕು.

5. ನಾಟಾ ಬೆಲಗುಗಳ ವಿಚಾರದಲ್ಲಿ ಆಡಿ ಬಂದಕ್ಕೆ ಇಷ್ಟರಂತೆ ಯಂತಲೂ ಗಳುಗಳ ಬಗ್ಯೆ ವಂದುನೂರಕ್ಕೆ ಇಷ್ಟುಯೆಂತಲೂ ಸಬೇಕು.